# ಯುಜಿನೀಟ್-2024 – ಮಾಹಿತಿ

## 2024ನೇ ಸಾಲಿಗೆ ಕರ್ನಾಟಕದಲ್ಲಿನ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳಿಗೆ ನೋಂದಣಿ ಮಾಡಲು ಹಾಗು ರೋಲ್ ನಂಬರ್ ಲಿಂಕ್ ಮಾಡಲು ದಿನಾಂಕ ವಿಸ್ತರಣೆ

ಅಭ್ಯರ್ಥಿಗಳ ಮತ್ತು ಪೋಷಕರ ಮನವಿ ಮೇರೆಗೆ, 2024ನೇ ಸಾಲಿಗೆ ಕರ್ನಾಟಕದಲ್ಲಿನ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳಿಗೆ ಹೊಸದಾಗಿ ನೋಂದಣಿ ಮಾಡಿ ಅರ್ಜಿ ಸಲ್ಲಿಸಿ ಶುಲ್ಕ ಪಾವತಿಸಲು ಮತ್ತು ಈಗಾಗಲೇ ಯುಜಿಸಿಇಟಿ-2024 ಕ್ಕೆ ಅರ್ಜಿ ಸಲ್ಲಿಸಿರುವವರಿಗೆ ಯುಜಿನೀಟ್ 2024ರ ರೋಲ್ ನಂಬರ್ ಅನ್ನು ನಮೂದಿಸಲು ದಿನಾಂಕ 16-08-2024 4 ಸಂ. 6.00 ರಿಂದ **19-08-2024** – ಬೆ. 10.00 ರವರೆಗೆ ಪೋರ್ಟಲ್ ಅನ್ನು ತೆರೆದಿಡಲಾಗಿರುತ್ತದೆ. **(Already registered need not register again)**

SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕದ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

UGNEET-2024ಕ್ಕೆ ನೋಂದಣಿ ಮಾಡಿಕೊಳ್ಳುವ ಬಗ್ಗೆ, ದಾಖಲೆಗಳ ಪರಿಶೀಲನೆ ಬಗ್ಗೆ ಹಾಗು ನಂತರದ ಪ್ರಕ್ರಿಯೆಗಳ ಕುರಿತು ಹೆಚ್ಚಿನ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಪಡೆಯಬಹುದು.

***VERIFICATION:*** OCI / PIO / NRI / Foreign Nationals ಅಭ್ಯರ್ಥಿಗಳು or NRI Ward ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8) ನಲ್ಲಿ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಮಾತ್ರ ***19-08-2024 ರಂದು ಬೆ. 11.00 ರಿಂದ ಮ. 2.00*** ರೊಳಗೆ ದಾಖಲಾತಿ ಪರಿಶೀಲನೆಗೆ ಕೆಇಎ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಖುದ್ದಾಗಿ ಹಾಜರಾಗಬೇಕು. **(Already verified need not appear again)**

ದಿನಾಂಕ 07-08-2024 ರಿಂದ 09-08-2024 ರ ವರೆಗೆ ಅಥವಾ 12-08-2024 ರಿಂದ 14-08-2024 ರವರೆಗೆ ನಡೆದ ಮೂಲ ದಾಖಲೆಗಳ ಪರಿಶೀಲನೆಗೆ ಗೈರು ಹಾಜರಾದ ಅಭ್ಯರ್ಥಿಗಳೂ ಸಹ ದಿನಾಂಕ 19-08-2024 ರಂದು (ಬೆ.11.00 ರಿಂದ ಮ.2.00) ಎಲ್ಲಾ ಅಗತ್ಯ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ಹಾಜರಾಗಬಹುದಾಗಿದೆ.

ದಾಖಲೆಗಳ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು UGNEET-2024 ಮಾಹಿತಿ ಪುಸ್ತಕವನ್ನು ನೋಡಬಹುದು. UGNEET-2024ಕ್ಕೆ ನೋಂದಣಿ ಮಾಡಿಕೊಳ್ಳಲು ಅಭ್ಯರ್ಥಿಗಳಿಗೆ ಇದು ಕೊನೆಯ ಹಾಗು ಅಂತಿಮ ಅವಕಾಶವಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ.

ಗಮನಿಸಿ: ಎನ್‌ಎಮ್‌ಸಿ / ಎನ್‌ಸಿಐಎಸ್‌ಎಮ್ ಅವರ ಸೂಚನೆ ಅನ್ವಯ ಸ್ಟ್ರೇ ವೇಕೆನ್ಸಿ ಸುತ್ತಿನ ಸೀಟು ಹಂಚಿಕೆ ಸೇರಿದಂತೆ ಎಲ್ಲಾ ಸುತ್ತಿನ ಸೀಟು ಹಂಚಿಕೆಯನ್ನು ಆನ್‌ಲೈನ್ ಮೂಲಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದಲೇ ನಡೆಸಲಾಗುವುದರಿಂದ, ಯುಜಿ ನೀಟ್ 2024 ರಲ್ಲಿ ಅರ್ಹತೆ ಪಡೆದ ಎಲ್ಲಾ ಅಭ್ಯರ್ಥಿಗಳು ಕರ್ನಾಟಕ ರಾಜ್ಯದಲ್ಲಿನ ವೈದ್ಯಕೀಯ / ದಂತ ವೈದ್ಯಕೀಯ / ಆಯುಷ್ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗಲು ಕೆಇಎ ನಲ್ಲಿ ಆನ್‌ಲೈನ್ ಮೂಲಕ ನೊಂದಾಯಿಸಿ, ದಾಖಲೆಗಳ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದೆ. (ಭಾರತ ಸರ್ಕಾರದ ಸೂಚನೆಗಳ ಅನ್ವಯ)

Date: 16-08-2024 Sd/-Executive Director.